ಶೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

(ಅ) ಬೆಂಗಳೂರು ನಗರದಲ್ಲಿ 159 ಪೆಟ್ರೋಲ್ ಬಂಕ್‌ಗಳಿವೆ. ಕಳೆದ 5 ವರ್ಷಗಳಲ್ಲಿ 285 ತನಿಖೆಗಳನ್ನು ನಡೆಸಲಾಗಿದೆ. ಇವುಗಳಲ್ಲಿ 4 ಪ್ರಕರಣಗಳಲ್ಲಿ ಕಲಬೆರಕೆಯಾಗಿರುವುದು ಕಂಡುಬಂದಿದೆ.

(ಆ) ಮೂರು ಪೆಟ್ರೋಲ್ ಬಂಕ್‌ಗಳ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆಯನ್ವಯ ಸಂಬಂಧಿಸಿದ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಇನ್ನೊಂದು ಪ್ರಕರಣದಲ್ಲಿ ಕಲಬೆರಕೆಯಾಗಿರುವ ಪೆಟ್ರೋಲನ್ನು ವಶಪಡಿಸಿಕೊಳ್ಳದೇ ಇದ್ದುದರಿಂದ ಪೆಟ್ರೋಲ್ ಸರಬರಾಜು ನಿಲ್ಲಿಸುವಂತೆ ತೈಲ ಕಂಪನಿಗೆ ಕೋರಲಾಗಿದ್ದು ತೈಲ ಕಂಪನಿಯವರು ಸರಬರಾಜು ನಿಲ್ಲಿಸಲು ನೀಡಿರುವ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ.

(ಇ) ನಿಜ, ಆದರೆ ಇಲಾಖೆಯು ತೆಗೆದುಕೊಂಡ ಕ್ರಮವು ನಿಯಮಾನುಸಾರವಾಗಿದ್ದರಿಂದ ಪೆಟ್ರೋಲ್ ಬಂಕ್ ಮಾಲೀಕರು ಪ್ರತಿಭಟನೆಯನ್ನು ಆದೇ ದಿನದಲ್ಲಿ ಹಿಂದಕ್ಕೆ ಪಡೆದಿರುತ್ತಾರೆ.

ರಾಜ್ಯದಲ್ಲಿ ಸ್ಮಾರ್ಟ್ ಕಾರ್ಡು ಜಾರಿ

1871 (2552) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಸರ್ಕಾರಿ ಕಛೇರಿಗಳ ಆಡಳಿತ ವ್ಯವಸ್ಥೆ ಸುಧಾರಿಸುವ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ ವಿಧಾನಸೌಧ ಮತ್ತು ಬಹುಮಹಡಿ ಕಟ್ಟಡದಲ್ಲಿ ಸರ್ಕಾರಿ ನೌಕರರಿಗೆ "ಸ್ಮಾರ್ಟ್ ಕಾರ್ಡ್" ವ್ಯವಸ್ಥೆಯನ್ನು ಜಾರಿಗೆ ತರುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಈ ಯೋಜನೆಯನ್ನು ಜಾರಿಗೆ ತರಲು ತಗಲುವ ವೆಚ್ಚವೆಷ್ಟು?

ಶೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ಹೌದು,

ಅಂದಾಜು 18 ರಿಂದ 20 ಲಕ್ಷ ರೂಪಾಯಿಗಳು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬಟ್ಟೆ ಅಂಗಡಿಗೆ ಬೆಂಕಿ

1864 (2154) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಿಂಧಗಿ ಮತಕ್ಷೇತ್ರದ ದೇವರ ಹಿಪ್ಪರಗಿಯ ಉಸ್ತಾನ್ ಸಾಬ್ ಭಜನ್ ಸಾಭ ಒಡೊಡಗಿ ಇವರ ಬಟ್ಟೆಯ ಅಂಗಡಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸುಟ್ಟು ಸುಮಾರು 5 ಲಕ್ಷ ಅಪಾರ ಹಾನಿಗೊಳಗಾದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;